

# ಪುಸ್ತಕಕ್ಕೆ ಬಗ್ಗದ ಮಸ್ತಕ ಮೊಬೈಲ್‌ಗೆ ಬಗ್ಗಿತು

**ಯಾರನ್ನು ಬೇಕಾದರೂ ತನ್ನ ಮುಂದೆ ತಲೆ ತಗ್ಗಿಸುವಂತೆ ಮಾಡಬಲ್ಲ ತಾಕತ್ತು ಮೊಬೈಲ್‌ನದ್ದು. ಅದು ಸೃಷ್ಟಿಸಿರುವ ಮಾಯಾಜಾಲದಲ್ಲಿ ಸಿಲುಕದವರು ಯಾರಾದರೂ ಉಂಟೆ?**

■ ಪ್ರೀತಿ ಎಮ್. ಸಂಗಮ್



ಪುಸ್ತಕ ಹೇಳಿತು: ‘ಇಂದು ನೀನು ನನ್ನನ್ನು ತಲೆ ತಗ್ಗಿಸಿ ಓದಿದರೆ ಮುಂದೆ ನಾನು ನಿನ್ನನ್ನು ತಲೆ ಎತ್ತುವಂತೆ ಮಾಡುತ್ತೇನೆ’. ಮೊಬೈಲ್ ಭರವಸೆ ನೀಡಿತು: ‘ಇಂದು ನೀನು ನನ್ನನ್ನು ತಲೆ ತಗ್ಗಿಸಿ ನೋಡಿದರೆ ಮುಂದೆ ನಾನು ನಿನ್ನನ್ನು ಎಂದಿಗೂ ತಲೆ ಎತ್ತದಂತೆ ನೋಡಿಕೊಳ್ಳುತ್ತೇನೆ’.

ಅದಕ್ಕೆ ಮೊಬೈಲ್ ದಾಸರೆಲ್ಲ ಅಂದುಕೊಂಡರೇನೋ, ‘ಇಡೀ ವಿಶ್ವವನ್ನೇ ಅಂಗೈಯಗಲ ಜಂಗಮವಾಣಿಯಲ್ಲಿಯೇ ನೋಡಲು ಸಿಗುವುದಾದರೆ ಕಷ್ಟಪಟ್ಟು ಪುಸ್ತಕ ಓದಿ ಮಸ್ತಕ ಎತ್ತಿ ನೋಡುವುದಾದರೂ ಏನು?’ ಎಂದು. ಹಾಗಾಗಿ ಪುಸ್ತಕಕ್ಕೆ ಬಗ್ಗದ ಮಸ್ತಕ ಮೊಬೈಲ್‌ಗೆ ಬಗ್ಗುತ್ತಲೇ ಇದೆ.

ಶರಶಯ್ಯೆಯಲ್ಲಿದ್ದ ಭೀಷ್ಮ ಪಿತಾಮಹರಿಗೆ ಶ್ರೀಕೃಷ್ಣನು ಮೆದುಳಾಗಿ ಸ್ಮರಣಶಕ್ತಿ ನೀಡಿ, ಕಣ್ಣಾಗಿ ದೃಷ್ಟಿಯನ್ನಿತ್ತು, ಜಿಹ್ವೆಯಾಗಿ ವಾಣಿಯನ್ನಿತ್ತು, ಶರೀರವಾಗಿ ಚೈತನ್ಯ ನೀಡಿ ಯುಧಿಷ್ಠಿರನಿಗೆ ವಿಷ್ಣುಸಹಸ್ರನಾಮ ಹಾಗೂ ಅದರ ಪಾರಾಯಣದ ಮಹತ್ವವನ್ನು ವಿವರಿಸುವಂತೆ, ಜಡಶಯ್ಯೆಯಲ್ಲಿರುವ ಜನರಿಗೆ ಕಲಿಯುಗದ ದೇವರಾದ ಶ್ರೀ ಜಂಗಮವಾಣಿಯು ತಾಯಿಯಾಗಿ ಮಮತೆ ಕೊಟ್ಟು, ತಂದೆಯಾಗಿ ಆತ್ಮವಿಶ್ವಾಸ ನೆಟ್ಟು, ಗುರುವಾಗಿ ಮಾರ್ಗದರ್ಶನ ಮಾಡಿ, ಸ್ನೇಹಿತನಾಗಿ ಸ್ನೇಹ ಕೊಟ್ಟು, ಬಂಧುವಾಗಿ ಬೆಂಬಲವಿತ್ತು, ನೆರೆಹೊರೆಯಾಗಿ ನೆರವು ಕೊಟ್ಟು ಎಮ್ಮೆಗೆ ಮೂಗುದಾರ ಹಾಕಿದಂತೆ ಮನುಷ್ಯನ ಮಸ್ತಕಕ್ಕೆ ಹಗ್ಗ ಕಟ್ಟಿ ತನ್ನತ್ತ ಹಿಡಿದೆಳೆಯುತ್ತಲೇ ಇರುತ್ತದೆ.

ಅನನ್ಯಾಶ್ಚಿಂತಯಂತೋ ಮಾಂ
ಯೇ ಜನಾಃ ಪರ್ಯುಪಾಸತೇ
ತೇಷಾಂ ನಿತ್ಯಾಭಿಯುಕ್ತಾನಾಂ
ಯೋಗಕ್ಷೇಮಂ ವಹಾಮ್ಯಹಮ್

ಎಂದು ಹೇಗೆ ಶ್ರೀಕೃಷ್ಣನು ಏಕಮನಸ್ಸಿನಿಂದ ತನ್ನ ಉಪಾಸನೆಯಲ್ಲಿ ತೊಡಗುವ ಭಕ್ತರಿಗೆ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವ ಭರವಸೆಯನ್ನು ಕೊಟ್ಟನೋ ಹಾಗೆಯೇ, ಶ್ರೀ ಜಂಗಮವಾಣಿಯು ಕೂಡ ತನ್ನ ದಾಸರಿಗೆ ಭರವಸೆಯನ್ನು ಕೊಡುವುದರಲ್ಲಿ ಶ್ರೀಕೃಷ್ಣನಿಗೆ ಏನೂ ಕಡಿಮೆಯಿಲ್ಲ. ‘ಯಾರು ಯಾವಾಗಲೂ ಏಕ ಮನಸ್ಸಿನಿಂದ ತನ್ನ ಬಗ್ಗೆಯೇ ಯೋಚಿಸುತ್ತಾ ಯೋಗಾರೂಢರಾಗುತ್ತಾರೋ, ಯಾರ ಕಣ್ಣುಗಳು ಸದಾ ತನ್ನ ದರ್ಶನವನ್ನೇ ಪಡೆದು ಪಾವನವಾಗುತ್ತವೆಯೋ, ಯಾರ ಕರ್ಣಗಳು ಸದಾ ತನ್ನನ್ನೇ ಆಲಿಸುತ್ತ ಆಂತರಿಕಸುಖವನ್ನು ಪಡೆಯುತ್ತವೆಯೋ, ಯಾರು ತಮ್ಮ ಕರಗಳನ್ನು ಸದಾ ತನ್ನ ಸೇವೆಯಲ್ಲಿಯೇ (ಬಾಡಿ ಮಸಾಜ್ ಅರ್ಥಾತ್ ಸ್ಕ್ರಾಲಿಂಗ್ ಮತ್ತು ಟೈಪಿಂಗ್) ನಿರತವಾಗಿಸಿ ನಿತ್ಯಮುಕ್ತರಾಗುತ್ತಾರೋ ಅಂತಹವರ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಆರೋಗ್ಯವನ್ನು ಅಸ್ತವ್ಯಸ್ತವಾಗುವ ಹಾಗೆ ನೋಡಿಕೊಳ್ಳುತ್ತೇನೆ’ ಎನ್ನುವ ಭರವಸೆ ಕೊಡುತ್ತದೆ.

‘ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ’ ಎನ್ನುವ ಗಾದೆ ಮಾತು ಬೇರೆಲ್ಲ ವಿಷಯದಲ್ಲಿ ಸತ್ಯವಾದರೂ ಮೊಬೈಲ್ ವಿಷಯದಲ್ಲಂತೂ ಶುದ್ಧ ಸುಳ್ಳು. ಏಕೆಂದರೆ ಜೀವನದ ಯಾವುದೇ ಹಂತದಲ್ಲೂ (ಶೈಶವ, ಬಾಲ್ಯ, ಪ್ರೌಢಾವಸ್ಥೆ, ಯೌವನ, ವೃದ್ಧಾಪ್ಯ) ಮನುಷ್ಯರು ಬಗ್ಗುವ ಹಾಗೆ ಮಾಡುವ ತಾಕತ್ತು ಮೊಬೈಲ್‌ಗಿದೆ. ಮೊದಲೆಲ್ಲಾ ಹಾಸಿಗೆಯಿಂದೆದ್ದ ತಕ್ಷಣ ನಮ್ಮ ತಲೆ ಬಾಗುತ್ತಿತ್ತು. ಏತಕ್ಕೆ? ನಮ್ಮ ಕರದಲ್ಲಿ ವಾಸವಾಗಿರುವ ದೇವತೆಗಳ ದರ್ಶನ ಮಾಡಲು. ನಮ್ಮ ಎರಡೂ ಕರಗಳನ್ನು ಜೋಡಿಸಿ ಬೊಗಸೆ ಮಾಡಿ ಅದರಲ್ಲಿ ನಮ್ಮ ಏಕಾಗ್ರತೆಯನ್ನು ಸ್ಥಿರವಾಗಿಸಿ, ‘ಕರಾಗ್ರೇ ವಸತೇ ಲಕ್ಷ್ಮೀ...’ ಶ್ಲೋಕ ಪಠಿಸುತ್ತಿದ್ದೆವು. ಈಗಲೂ ಏನೂ ಬದಲಾಗಿಲ್ಲ. ಶ್ಲೋಕದಲ್ಲಿ ಸ್ವಲ್ಪ ಬದಲಾವಣೆಯಾಗಿದೆಯಷ್ಟೇ. ಹಾಸಿಗೆಯಿಂದೆದ್ದ ತಕ್ಷಣ ಈಗಲೂ ನಮ್ಮ ತಲೆ ಬಾಗುತ್ತದೆ. ಏತಕ್ಕೆ? ನಮ್ಮ ಕರದಲ್ಲಿಯೇ ವಾಸ ಮಾಡುವ ಮೊಬೈಲ್ ದೇವರ ದರ್ಶನ ಮಾಡಲು. ಅದರಲ್ಲಿ ನಮ್ಮ ಏಕಾಗ್ರತೆಯನ್ನು ಸ್ಥಿರವಾಗಿಸಿ,

ಕರೇ ವಸತೇ ಭ್ರಮಣಧ್ವನಿಃ|
ಭ್ರಮಣಧ್ವನ್ಯಗ್ರೇ ವಸತೇ ಫೇಸ್ಬುಕ್
ಭ್ರಮಣಧ್ವನಿ ಮಧ್ಯೇ ವಾಟ್ಸಾಪ್
ಭ್ರಮಣಧ್ವನಿ ಮೂಲೇ ಸ್ಥಿತೇ ಇನ್ಸ್ಟಾಗ್ರಾಂ
ಪ್ರಭಾತೇ ಭ್ರಮಣಧ್ವನಿ ದರ್ಶನಂ||

ಎಂದು ಶ್ಲೋಕ ಪಠಿಸುತ್ತೇವೆ. ಇದು ಮನೆ ಮನೆಯ ಸುಪ್ರಭಾತ. (ಸಂಸ್ಕೃತದಲ್ಲಿ ಮೊಬೈಲ್‌ಗೆ